ಇದರ ಇಂಗಿತವನ್ನು ಅರಿತ ಕೆಲವರು ರೋಣ ತಾಲ್ಲೂಕಿನಲ್ಲಿ ರಜಾಕಾರ ವಿರೋಧಿ ಚಳುವಳಿಯಲ್ಲಿ ಯೋಧರೆಂದು ಹೇಳಿಕೊಳ್ಳುತ್ತಿದ್ದು ಈ ಚಳುವಳಿಯ ಸೇನಾಪತಿಯೆಂಬ ವ್ಯಕ್ತಿ ಕಾಣಿಸಿಕೊಂಡಿದ್ದಾನೆ. ಈ ವ್ಯಕ್ತಿ ರಜಾಕಾರ ಚಳುವಳಿಯಲ್ಲಿ ಹೋರಾಡಿದವನೂ ಅಲ್ಲ. ಆ ಚಳುವಳಿಯನ್ನೂ ನೋಡಿದವನೂ ಅಲ್ಲ. ಈಗಿದ್ದೂ ಆತವನು ಶಿಭಿರಾಧಿಪತಿಯೆಂದು ಹೇಳುತ್ತಾ ರೋಣ ಹಾಗೂ ಯಲಬುರ್ಗ ತಾಲ್ಲೂಕ್ ಗಳಲ್ಲಿ ಸಾವಿರಾರು ಜನರಿಂದ ದುಡ್ಡು ತೆಗೆಯುಕೊಂಡು ಹೋರಾಟದಲ್ಲಿ ಭಾಗವಹಿಸಿದವರೆಂದು ಅವರೆಲ್ಲರಿಗೆ ಪ್ರಮಾಣ ಪತ್ರ ಕೊಡುತ್ತಿದ್ದಾನೆ. ಈ ರೀತಿ ಸುಳ್ಳು ಪ್ರಮಾಣ ಪತ್ರ ಪಡೆದು ಅದನ್ನು ಸರ್ಕಾರಕ್ಕೆ ಸಲ್ಲಿಸಿ ಅರ್ತಾಥ್ ಸರ್ಕಾರದ ಕಣ್ಣಿಗೆ ಮಣ್ಣೆರೆಚಿ ಮಾಸಿಕ ವಿಶ್ರಾಂತಿ ವೇತನ ಪಡೆಯುತ್ತಿದ್ದು ಇಂತಹವರ ಹಾವಳಿ ದಿನೇ ದಿನೇ ಹೆಚ್ಚಾಗಿ ಬೊಕ್ಕಸದ ಲೂಟಿಯಾಗುತ್ತಿದೆ.

ಸರ್ಕಾರದ ಹಣಕಾಸಿನ ಸ್ಥಿತಿ ಸದ್ಯಕ್ಕೆ ಆಷ್ಟು ಸರಿಯಾಗಿಲ್ಲ. ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಭಾಗವಹಿಸಿದ್ದೇವೆ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದವರನ್ನು ಪತ್ತೆ ಮಾಡಿ ಅಂತಹವರ ವಿಶ್ರಾಂತಿ ವೇತನವನ್ನು ನಿಲ್ಲಿಸುತ್ತಿರುವ ಸಮಯದಲ್ಲೇ ಈ ಹೊಸ ಜಾಲ ತಲೆ ಎತ್ತಿದೆ. ರೋಣ ಮತ್ತು ಯಲಬುರ್ಗಾ ತಾಲ್ಲೂಕ್‌ಗಳಲ್ಲಿ ನಾಯಿಕೊಡೆಗಳಂತೆ ಹುಟ್ಟಿ ಸ್ವಾತಂತ್ರ್ಯ ಯೋಧರು ಹುಟ್ಟಿಕೊಂಡು ಸರ್ಕಾರದ ಕೋಟ್ಯಾಂತರ ಹಣವನ್ನು ಲಪಟಾಯಿಸುತ್ತಿದ್ದಾರೆ. ಇದರಿಂದ ಸ್ವಾತಂತ್ರ್ಯ ಮತ್ತು ಹೋರಾಟಗಳೆಂಬ ಹೆಸರಿಗೆ ಕಳಂಕ ಬಂದಿದೆ. ನಿಜವಾದ ಹೋರಾಟಗಾರರಿಗೆ ವಿಶ್ರಾಂತಿ ವೇತನ ದೊರೆಯುವುದಕ್ಕೆ ನನ್ನ ಆಕ್ಷೇಪಣೆ ಇಲ್ಲ. ಆದರೆ ಸರ್ಕಾರದ ಬೊಕ್ಕಸವನ್ನು ಹಾಡು ಹಗಲಿನಲ್ಲೇ ಲೂಟಿ ಮಾಡುತ್ತಿದ್ದು ನಿಜವಾದ ಯೋಧರು ಮತ್ತು ದೇಶಪ್ರೇಮಿಗಳು ಈ ನಿರಂತರ ಲೂಟಿಯನ್ನು ನೋಡಿ ಗಾಬರಿಗೊಂಡಿದ್ದಾರೆ.

ಕಾರಣ ಈ ಕೂಡಲೇ ಸಿ.ಓ.ಡಿ. ತನಿಖೆಯನ್ನು ನಡೆಸಿ ರೋಣ ಹಾಗೂ ಯಲಬುರ್ಗಾ ತಾಲ್ಲೂಕುಗಳ ಖೊಟ್ಟಿ ಯೋಧರಿಗೆ ಸಂದಾಯವಾಗುತ್ತಿರುವ ಹಣವನ್ನು ಅಂದರೆ ವಿಶ್ರಾಂತಿವೇತನವನ್ನು ತಡೆ ಹಿಡಿಯಬೇಕು ಮತ್ತು ಆ ಪ್ರದೇಶದಲ್ಲಿ ಖೊಟ್ಟಿ ಸ್ವಾತಂತ್ರ್ಯ ಯೋಧರಿಗೆ ಪ್ರಮಾಣ ಪತ್ರ ನೀಡುತ್ತಿರುವ ಖೋಟಾ ಶಿಭಿರಾಧಿಪತಿಯನ್ನು ವಿಚಾರಣೆಗನ್ನಯ ಬಂಧಿಸುವುದರ ಮೂಲಕ ಸರ್ಕಾರಿ ಬೊಕ್ಕಸದ ಲೂಟಿಯನ್ನು ತಪ್ಪಿಸಬೇಕೆಂದೂ ನಾನು ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳ ತೀವ್ರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು). — ಸನ್ಮಾನ್ಯ ಅಧ್ಯಕ್ಷರೆ, ಇದನ್ನು ಸೂಕ್ತ ಕ್ರಮಕ್ಕಾಗಿ ಮತ್ತು ಉತ್ತರಕ್ಕಾಗಿ ಕಳಿಸಿ, ಉತ್ತರ ತರಿಸಿದ ನಂತರ ಅವರಿಗೆ ಕಳಿಸಿಕೊಡುತ್ತೇನೆ.

6. ಮಂಗಳೂರಿನಲ್ಲಿ ಪತ್ರಿಕೋದ್ಯಮಿಗಳಿಗೆ ಮನೆ ಕಟ್ಟಲು ಹುಡ್ಕೋ ಯೋಜನೆಯಿಂದ ಸಾಲ ದೊರಕಿಸುವುದು,

ಶ್ರೀ ಬ್ಲೇಸಿಯಸ್ ಎಂ. ಡಿಸೌಜ (ಮಂಗಳೂರು).—ಮಾನ್ಯ ಅಧ್ಯಕ್ಷರೆ, ರಾಜ್ಯದ ಚಿಕ್ಕ ಉಳಿತಾಯ ಸಚಿವರು ಈಚೆಗೆ ಮಂಗಳೂರಿಗೆ ಬಂದಿದ್ದರು. ದಕ್ಷಿಣ ಕನ್ನಡದ ಪತ್ರಿಕೋದ್ಯೋಗಿಗಳು ಅವರನ್ನು ಆಗ ಭೇಟಿ ಆದರು. ಉದ್ದೇಶ ಇಷ್ಟೆ. ಪತ್ರಿಕೋದ್ಯಮಿಗಳಿಗೆ ಮನೆ ಕಟ್ಟಿಸಲು ಸರ್ಕಾರದಿಂದ ಸಾಲದ ನೆರವು ನೀಡಬೇಕು ಎನ್ನುವುದು. ಮಾನ್ಯ ಸಚಿವರು, ಪತ್ರಿಕೋದ್ಯೋಗಿಗಳ ನಿಯೋಗಕ್ಕೆ ಆಶ್ವಾಸನೆ ಇತ್ತರು,—ಹುಡ್ಕೋ ಸಾಲ ಕೊಡಿಸಲಾಗುವುದು, ಅಂಚೆ ಕಚೇರಿ ರಿಕರಿಂಗ್ ಡಿಪಾಸಿಟ್‌ಗೆ ಹೊಂದುವ ಮಾರುಪಾವತಿ ಕಂತು ನೀಡಲಾಗುವುದು, ನ್ಯಾಷನಲ್ ಸೇವಿಂಗ್ಸ್ ಡೈರೆಕ್ಟೊರೇಟ್ ಇದಕ್ಕೆ ಭದ್ರತೆ ನೀಡುವುದು ಎಂದು.

ಇಂತಹ ಸವಲತ್ತು ಈಗ ಕೆ.ಎಸ್.ಆರ್.ಟಿ.ಸಿ. ನೌಕರರಿಗೆ ನೀಡಲಾಗಿದೆ ಎಂದು ತಿಳಿಯುತ್ತೇನೆ. ಪತ್ರಿಕೋದ್ಯೋಗಿಗಳಿಗೂ ಈ ಸವಲತ್ತು ಬೇಗ ನೀಡಿ, ಇತ್ತ ಆಶ್ವಾಸನೆಯನ್ನು ಮಾನ್ಯ ಮಂತ್ರಿಗಳು ಉಳಿಸಿಕೊಳ್ಳಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಮಹಮದ್ ಮೊಹಿನುದ್ದೀನ್.—ಮಾನ್ಯ ಅಧ್ಯಕ್ಷರೆ, ಕರ್ನಾಟಕ ಗೃಹ ಮಂಡಲಿಯಲ್ಲಿ ನಗದು ಸಾಲದ ಯೋಜನೆ ಇದೆ. ಈ ಯೋಜನೆಯಲ್ಲಿ ಯಾರಿಗೆ ಸೈಟು ಉಂಟು ಅವರು ಸಾಲ ತೆಗೆದು

ಕೊಳ್ಳಬಹುದು. ಹೆಚ್ಚಿನ ಮಾಹಿತಿ ಬೇಕಾದರೆ ಹೌಸಿಂಗ್ ಬೋರ್ಡ್‌ಗೆ ಬರೆಯಬಹುದು ಅಥವಾ ಸರ್ಕಾರಕ್ಕೆ ಬರೆದರೆ ನಾವು ಮಾಹಿತಿಯನ್ನು ತರಿಸಿ ಕೊಡುತ್ತೇವೆ.

7. ಚಿಂಚೋಳಿ ತಾಲ್ಲೂಕಿನ ವಂಲ್ಲಾಮರಿ ನದಿಗೆ ಹಾಕಿರುವ ಪಂಪುಸೆಟ್ಟುಗಳಿಗೆ ವಿದ್ಯುತ್ತನ್ನು ನಿಲ್ಲಿಸದಿರುವಂತೆ ಮುನ್ಸೂಚನೆ.

ಶ್ರೀ ಎಂ. ವೀರಯ್ಯ ಸ್ವಾಮಿ (ಚಿಂಚೋಳಿ). –ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯಲ್ಲಿನ ನದಿಗಳಿರುವ ಕಡೆಗಳಲ್ಲಿ ವಿಶೇಷವಾಗಿ ಚಿಂಚೋಳಿ ತಾಲ್ಲೂಕಿನಲ್ಲಿರುವ ವಂಲ್ಲಾಮಾರಿ ನದಿಗೆ ಹಾಕಿರುವ ನೀರಾವರಿ ಪಂಪುಸೆಟ್ಟುಗಳಿಗೆ ಪೂರೈಸುತ್ತಿರುವ ವಿದ್ಯುತ್ತನ್ನು ಮುಂಬರುವ ಮಾರ್ಚಿ ತಿಂಗಳಿನಿಂದ ನಿಲ್ಲಿಸುವುದಾಗಿ ವಿದ್ಯುಚ್ಛಕ್ತಿ ಇಲಾಖೆಯವರು ತಿಳಿಸಿದ್ದು ಇದರಿಂದ ರೈತರು ಕಂಗಾಲಾಗಿದ್ದಾರೆ. ನೀರಿಲ್ಲದಿರುವ ಕಡೆಗಳಲ್ಲಿ ಹಾಗೂ ಕುಡಿಯುವ ನೀರಿಗೆ ತೊಂದರೆಯಾಗತಕ್ಕ ಸಂದರ್ಭಗಳಲ್ಲಿ ಮಾತ್ರ ವಿದ್ಯುಚ್ಛಕ್ತಿಯನ್ನು ನಿಲ್ಲಿಸಿ ಇತರೆಡೆಗಳಲ್ಲಿ ವಿದ್ಯುಚ್ಛಕ್ತಿಯನ್ನು ನಿಲ್ಲಿಸದಂತೆ ವಿದ್ಯುಚ್ಛಕ್ತಿ ಇಲಾಖೆಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಸರಕಾರವನ್ನು ನಾನು ಒತ್ತಾಯಿಸುವುದಲ್ಲದೆ, ಸದರಿ ಪಂಪುಸೆಟ್ಟುಗಳಿಂದ ನೀರಾವರಿಯಾಗುತ್ತಿರುವ ಬೆಳೆಗಳೆಲ್ಲಾ ವಿಶೇಷವಾಗಿ ಕಬ್ಬಿನ ಬೆಳೆ ಒಣಗಿ ಹೋಗದಂತೆ ಕ್ರಮ ಕೈಗೊಳ್ಳಬೇಕೆಂದೂ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಹಿಂದಿನ ಎರಡು ವರ್ಷಗಳಲ್ಲಿ ಇದ್ದ ಪರಿಸ್ಥಿತಿಯನ್ನು ನೋಡಿ ಈ ಆಜ್ಞೆ ಹೊರಡಿಸಿದೆವು ಬಹಳ ತಡವಾಗಿ ಬಂದ ಮಳೆಯಿಂದ ಪರಿಸ್ಥಿತಿ ಉತ್ತಮವಾಗಿರುವುದರಿಂದ ಈಗ ಆ ಆಜ್ಞೆಯನ್ನು ವಾಪಸ್ ಪಡೆದಿದ್ದೇವೆ. ಇದನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಇದರಿಂದ ನೀವೇನೂ ಆತಂಕ ಪಡಬೇಕಾಗಿಲ್ಲ.

8. ಬಾಗೇಪಲ್ಲಿ ತಾಲ್ಲೂಕು ಸಮಿತಿಯ ಅಧ್ಯಕ್ಷರ ಸೂಚನೆಯನ್ನು ಕ್ಷೇತ್ರಾಧಿಕಾರಿ ನಿರ್ಲಕ್ಷಿಸುತ್ತಿರುವುದು.

ಶ್ರೀ ಬಿ. ನಾರಾಯಣ ಸ್ವಾಮಿ.—ಮಾನ್ಯ ಅಧ್ಯಕ್ಷರೆ, ಕೋಲಾರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕಿನ ತಾಲ್ಲೂಕು ಸಮಿತಿಯಲ್ಲಿ ಸಂಬಂಧಪಟ್ಟ ವಿಧಾನ ಸಭಾ ಸದಸ್ಯರನ್ನು ಅಧ್ಯಕ್ಷರನ್ನಾಗಿ ಮಾಡಿದ್ದು ಅಲ್ಲಿ ಅಧ್ಯಕ್ಷರಿಗಾಗಿ ಕೊಠಡಿ ಇರುವುದಿಲ್ಲ. ಪಂತ್ತು ಅಲ್ಲಿನ ಕ್ಷೇತ್ರಾಧಿಕಾರಿ ಕಾರ್ಯದರ್ಶಿಯಾಗಿರುತ್ತಾರೆ ಆದರೆ, ಇದುವರೆಗೂ ಅವರು ಒಂದೇ ಒಂದು ಸಭೆಯನ್ನು ಕರೆಯಲಾಗಿದ್ದು ಸಭೆ ಕರೆಯಬೇಕೆಂದು ತಿಳಿಸಿದರೆ ಪಕ್ಷದ ಕ್ಷೇತ್ರದ ವಿಧಾನ ಸಭಾ ಸದಸ್ಯರನ್ನು ಕೇಳಿ ಕರೆಯುತ್ತೇನೆ ಎಂದು ಹೇಳುತ್ತಿದ್ದು ಇದುವರೆಗೂ ಸಭೆ ಕರೆದಿರುವುದಿಲ್ಲ. ವಿನಾಕಾರಣ ಬಾಗೇಪಲ್ಲಿ—ಚಿಂತಾಮಣಿಗಳಿಗೆ ತಿರುಗಾಡಿ ಕೊಂಡಿರುತ್ತಾರೆ. ಬಾಗೇಪಲ್ಲಿಯಲ್ಲಿ ಇವರು ಇರುವುದೇ ಕಡಿಮೆ, ಅಧ್ಯಕ್ಷರ ಮಾತನ್ನೇ ಕೇಳದಿರುವಂತಹ ತಾಲ್ಲೂಕು ಸಮಿತಿಯಲ್ಲಿದ್ದೇನು ಪ್ರಯೋಜನ ಎಂಬ ಭಾವನೆ ಅಲ್ಲಿರುವ ಅಧ್ಯಕ್ಷರಿಗೆ ಬರುತ್ತದೆ. ಆದ್ದರಿಂದ ಸದರಿ ಕ್ಷೇತ್ರಾಧಿಕಾರಿಯವರಿಗೆ ಸೂಕ್ತ ನಿರ್ದೇಶನ ನೀಡಿ ಸರಿಯಾಗಿ ಕೆಲಸ ನಿರ್ವಹಿಸಿಕೊಂಡು ಹೋಗುವಂತೆ ತಿಳಿಸಬೇಕು. ಇಲ್ಲಿ ಪಕ್ಷದ ಪ್ರಶ್ನೆ ಉದ್ಭವಿಸುವುದಿಲ್ಲ. ಜನತೆಯ ಆಶೋತ್ತರಗಳನ್ನು ಈಡೇರಿಸುವಲ್ಲಿ ಅಧಿಕಾರಿಗಳು ಶ್ರಮಿಸಬೇಕು. ಇದನ್ನು ಕೂಡಲೇ ಸರಿಪಡಿಸುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ರಿಗಳು).—(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಯವರ ಪರವಾಗಿ ಉತ್ತರ ನೀಡಿದರು)

ಕರ್ನಾಟಕ ತಾಲ್ಲೂಕು ಪಂಚಾಯತ್ ಸಮಿತಿ (ಟ್ರಾನ್ಸ್‌ಕ್ಷನ್ ಆಫ್ ಬಿಸಿನೆಸ್ ರೂಲ್ಸ್, ೧೯೮೭ ನಿಯಮ ೩ರ ಪ್ರಕಾರ ತಾಲ್ಲೂಕು ಸಮಿತಿಯ ಸಭೆ ಕರೆಯುವ ದಿನಾಂಕ ಮತ್ತು ವೇಳೆಯನ್ನು ತಾಲ್ಲೂಕು ಸಮಿತಿಯ ಅಧ್ಯಕ್ಷರೇ ನಿಶ್ಚಯಿಸಬೇಕಾಗುತ್ತದೆ.

ಜಿಲ್ಲಾ ಪರಿಷತ್ ಕಾಯಿದೆಯ ಕಲಂ ೧೩೫ (೩)ರ ಪ್ರಕಾರ ಬಾಗೇಪಲ್ಲಿ ತಾಲ್ಲೂಕು ಪಂಚಾಯತಿ ಸಮಿತಿಗೆ ಬಾಗೇಪಲ್ಲಿ ಕ್ಷೇತ್ರದ ಎಂ.ಎಲ್.ಎ. ರವರನ್ನು ಅಧ್ಯಕ್ಷರನ್ನಾಗಿ ಮಾಡಲಾಗಿದೆ. ಅಧ್ಯಕ್ಷರು